# ಗಾಂಧೀತೋಟ

ಇಪ್ಪತ್ತು ವರ್ಷಗಳ ಅಲೆದಾಟದ ನಂತರ ಊರಿಗೆ ಮರಳಿರುವ ಕಥಾನಾಯಕ ತನ್ನ ಮನೆಯ ಮುಂದೆ ನಿಂತಿದ್ದಾನೆ. ನಟ್ಟಿರುಳಿನ ಮಬ್ಬಿನಲ್ಲಿ ನೋಡಿದರೆ ಅಲ್ಲಿ ಮನೆಯೆಲ್ಲಿದೆ? ಇರುವುದು ಅವಶೇಷಗಳಷ್ಟೇ. ಮನೆಯೊಳಗಿನ ವಸ್ತುಗಳೆಲ್ಲ ಸೂರೆಯಾಗಿವೆ. ಹೊತ್ತೊಯ್ಯಬಹುದಾದ ಮರಮುಟ್ಟುಗಳು ಊರವರ ಪಾಲಾಗಿ ಮೋಟುಗೋಡೆಗಳಷ್ಟೇ ಉಳಿದಿವೆ. ಆ ಅವಶೇಷಗಳ ನಡುವೆ ಗಾಂಧಿ ಮತ್ತು ವಿನೋಬಾ ಭಾವೆ ಅವರ ಪಟಗಳು ಇಣುಕುತ್ತಿವೆ; ಗೆದ್ದಲು ಹತ್ತಿ ವಿರೂಪಗೊಂಡ ಸ್ಥಿತಿಯಲ್ಲಿ.

ಎಸ್. ಗಂಗಾಧರಯ್ಯನವರ 'ಗಂಗಪಾಣಿ' ಕಾದಂಬರಿಯ ಈ ಸನ್ನಿವೇಶ ಈ ಹೊತ್ತಿನ ಭಾರತದ ಸಾಮಾಜಿಕ ಸ್ಥಿತಿಯನ್ನು ಸೂಚಿಸುತ್ತಿರುವಂತಿದೆ; ಗಾಂಧಿ ಹಾಗೂ ಗಾಂಧಿತತ್ವಗಳು ಹೇಗೆ ಅಪ್ರಸ್ತುತಗೊಂಡಿವೆ ಎನ್ನುವುದನ್ನು ಕಾಣಿಸುವಂತಿದೆ.

ಗಂಗಪಾಣಿ ಎನ್ನುವುದು ತುಮಕೂರು ಸೀಮೆಯ ಪ್ರಸಿದ್ಧ ತೆಂಗಿನತಳಿಯೊಂದರ ಹೆಸರು. ಕಾದಂಬರಿಯಲ್ಲಿನ ಗಂಗಪಾಣಿ ತೆಂಗಿನಗಿಡಕ್ಕೆ ಮತ್ತೊಂದು ವಿಶೇಷವೂ ಇದೆ. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಊರಿಗೆ ಬಂದಿದ್ದ ಗಾಂಧೀಜಿ ಮುಟ್ಟಿದ್ದ ಗಿಡವದು. ಮಹಾತ್ಮನ ಸ್ಪರ್ಶದ ಕಾರಣದಿಂದಾಗಿ ಅದಕ್ಕೆ 'ಗಾಂಧಿಗಿಡ' ಎನ್ನುವ ಹೆಸರು. ಗಾಂಧಿಗಿಡದಿಂದ ಸಸಿಗಳನ್ನು ಮಾಡಿ, 'ಗಾಂಧೀತೋಟ' ರೂಪಿಸಬೇಕೆನ್ನುವುದು ಕಥಾನಾಯಕನ ಕನಸು. ದೀರ್ಘ ಅಲೆದಾಟದ ನಡುವೆಯೂ ಗಾಂಧೀತೋಟದ ಕನಸನ್ನು ಜತನವಾಗಿಟ್ಟುಕೊಂಡು, ಊರಿಗೆ ಮರಳಿದರೆ ಗಿಡವೆಲ್ಲಿದೆ? ಅದು ತುಂಡುತುಂಡುಗಳಾಗಿ ಮಣ್ಣಲ್ಲಿ ಕೊಳೆಯುತ್ತಿದೆ!

ಗಾಂಧೀಜಿ ಕೊಲೆಯಾದ ಸಂದರ್ಭದಲ್ಲಿ, ಗಂಗಪಾಣಿ ಗಿಡದ ಬಳಿ ದುಃಖತಪ್ತ ಜನರ ಜಾತ್ರೆಯೇ ನಡೆದಿತ್ತು. ಈಗ ಅದೇ ಜನ 'ಗಾಂಧಿಗಿಡ'ವನ್ನು ಬಿಟ್ಟುಕೊಟ್ಟಿದ್ದಾರೆ. ಗಾಂಧಿಮೌಲ್ಯಗಳ ವಾರಸುದಾರನಂತಿದ್ದ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದ ವ್ಯಕ್ತಿಯ ಮನೆ ಸೂರೆಯಾಗಿದೆ. ಒಂದೆಡೆ ಭಂಗಗೊಂಡ ಮನೆ, ಇನ್ನೊಂದೆಡೆ ಮಣ್ಣಾಗುತ್ತಿರುವ ಮರ. ಭಗ್ನಗೊಂಡ ಮರ ಹಾಗೂ ಮನೆ ಕಥಾನಾಯಕನಿಗೆ ಸಂಬಂಧಿಸಿದ ವೈಯಕ್ತಿಕ ನಷ್ಟವಷ್ಟೇ ಅಲ್ಲ; ಅದು ಊರಿಗಾದ ನಷ್ಟವೂ ಹೌದು.

ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಊರೂ ಮೌಲ್ಯದ ಕೆಲವು ಮಾದರಿಗಳನ್ನು ಕಟ್ಟಿಕೊಂಡಿರುತ್ತದೆ. ಆ ಮೌಲ್ಯ ವ್ಯಕ್ತಿಯ ರೂಪದಲ್ಲಿರಬಹುದು, ವಿಧಿವಿಧಾನಗಳ ನಂಬಿಕೆಯ ರೂಪದಲ್ಲಿರಬಹುದು, ಪ್ರಕೃತಿಯಲ್ಲಿನ ಬಿಂಬಗಳ ರೂಪದಲ್ಲೂ ಇರಬಹುದು. ಇಂಥ ಮಾದರಿಗಳನ್ನು ವಿಸ್ತೃತ ನೆಲೆಯಲ್ಲಿ ಸಮಾಜ ಹಾಗೂ ದೇಶದ ನೆಲೆಗಟ್ಟಿನಲ್ಲೂ ನೋಡಬಹುದು. ಈ ಮಾದರಿಗಳು ನಮ್ಮ ಬದುಕಿನ ದಿಕ್ಕನ್ನು ನಿರ್ದೇಶಿಸುತ್ತಿರುತ್ತವೆ; ವ್ಯಕ್ತಿ ಹಾಗೂ ಸಮಷ್ಟಿ ಮಾನವೀಯತೆ ಕಳೆದುಕೊಳ್ಳದಂತೆ ನಿಯಂತ್ರಿಸುತ್ತಿರುತ್ತವೆ. ಅಂಥ ಮಾದರಿಗಳ ರೂಪ 'ಗಂಗಪಾಣಿ' ಕಾದಂಬರಿಯಲ್ಲಿನ ಗಾಂಧಿ ರೂಪಕ. ಮಹಾತ್ಮನ ಹೆಸರಿನ ತೆಂಗಿನಮರದ ಸಾವು, 'ಮೌಲ್ಯ ಮಾದರಿ'ಯೊಂದರ ಅವನತಿಯ ಸಂಕೇತ. ಗಾಂಧಿ ತತ್ವಗಳನ್ನು ಉಸಿರಾಡುತ್ತಿದ್ದ ಮನೆ ಭಂಗಗೊಂಡಿರುವುದು ಸಮಷ್ಟಿ ನೈತಿಕತೆಯ ಊರುಭಂಗ.

ಒಳಿತಿನ ಸಂಕೇತವಾಗಿ, ಮಾನವೀಯತೆಯ ಅಂತರ್ಜಲವಾಗಿ, ಸಾಮಾಜಿಕ ಆರೋಗ್ಯದ ಮಾತೃ ಮಾದರಿಗಳಾಗಿ ಗಾಂಧಿ ಹಾಗೂ ವಿನೋಬಾರ ವಿಚಾರಗಳು 'ಗಂಗಪಾಣಿ' ಕಾದಂಬರಿಯಲ್ಲಿ ಅನುರಣನಗೊಳ್ಳುತ್ತವೆ. ಈ ವೈಚಾರಿಕ ಮಾದರಿಗಳು ಭಂಗಗೊಂಡ ಸ್ಥಿತಿಯಲ್ಲಿ ಕಾದಂಬರಿ ಕೊನೆಗೊಳ್ಳುತ್ತದೆ. ಮುಂದೇನು?

'ಮೌಲ್ಯ ಮಾದರಿ'ಗಳು ಭಗ್ನಗೊಂಡ ಸ್ಥಿತಿ ಈಗ ನಮ್ಮದೂ, ನಾವು ಬದುಕುತ್ತಿರುವ ಸಮಾಜದ್ದೂ. ವರ್ತಮಾನದ ವೈರುಧ್ಯ ನೋಡಿ: ತಲೆಮಾರುಗಳಿಂದ ಯಾರನ್ನು ಹಾಗೂ ಯಾವುದನ್ನು ಆದರ್ಶ ಎಂದು ನಂಬಿಕೊಂಡು ಬಂದಿದ್ದೇವೋ, ಆ ಮಾದರಿಗಳನ್ನು ಭಂಗಗೊಳಿಸುವುದು ವರ್ತಮಾನದ ಪ್ರಮುಖ ಲಕ್ಷಣ ಎನ್ನುವಂತಾಗಿದೆ. ಗಾಂಧಿಯಷ್ಟೇ ಅಲ್ಲ; ಯಾವೊಬ್ಬ ಮಹಾತ್ಮನೂ ಈಗ ಪ್ರಶ್ನಾತೀತನಾಗಿ ಉಳಿದಿಲ್ಲ. ಒಬ್ಬರನ್ನು ಎತ್ತಿಹಿಡಿಯಲಿಕ್ಕಾಗಿ ಮತ್ತೊಬ್ಬರನ್ನು ಶಿಲುಬೆಗೇರಿಸುವ ಕಾಲಘಟ್ಟ ಇದು. ನಾವು ನೆಚ್ಚಿದವರು ಮತ್ತೊಬ್ಬರಿಗೆ ಅಪಥ್ಯ. ಅವರಿಗೆ ತಥ್ಯವೆನ್ನಿಸಿದವರ ಬಗ್ಗೆ ನಮ್ಮದು ಕಡೆಗಣ್ಣು. ಒಬ್ಬರಿಗೊಬ್ಬರು ಕಲ್ಲೆಸೆಯುತ್ತ, ಎದುರಾಳಿಗಿಂತಲೂ ನಮ್ಮ ಗಾಯ ಸಣ್ಣದೆಂದು ಸಂತೋಷಪಡುತ್ತಿರುವ ಸಂದರ್ಭ ಇಂದಿನದು.

ಈ ಕಲ್ಲೆಸೆಯುವಾಟದಲ್ಲಿ ನಮಗಾಗುವ ಗಾಯಗಳಿಗಿಂತಲೂ ಹೆಚ್ಚು ಘೋರವಾದುದು, ಮೌಲ್ಯವ್ಯವಸ್ಥೆಗೆ ಬೀಳುವ ಪೆಟ್ಟು. ಪ್ರತಿ ರೂಪಕಕ್ಕೆ ಪೆಟ್ಟು ಬಿದ್ದಾಗಲೂ ಆಗುವ ಗಾಯ, ನೂರಾರು ವರ್ಷಗಳಿಂದ ಜತನದಿಂದ ಕಟ್ಟಿಕೊಂಡು ಬಂದಿದ್ದ ಮೌಲ್ಯವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಿರುತ್ತದೆ.

ರೂಪಕಗಳನ್ನು ಜತನವಾಗಿರಿಸಿಕೊಳ್ಳಬೇಕು ಎಂದರೆ, ವಿಮರ್ಶಾರಾಹಿತ್ಯ ಸ್ಥಿತಿಯನ್ನು ಒಪ್ಪಿಕೊಳ್ಳುವುದು ಎಂದರ್ಥವಲ್ಲ. ಟೀಕೆ–ಟಿಪ್ಪಣಿಗಳನ್ನು ಘನತೆಯಿಂದ ಮಾಡುವ ಸಮಚಿತ್ತ ಅಗತ್ಯ. ವಿಮರ್ಶೆಗೆ ಅಗತ್ಯವಾದುದು ರಚನಾತ್ಮಕ ಗುಣವೇ ಹೊರತು ವಿಧ್ವಂಸಕ ಮನೋಭಾವವಲ್ಲ. ಪರನಿಂದೆಯ ಮೂಲಕ ನಮ್ಮ ವಿಚಾರಗಳನ್ನು ಎತ್ತಿಹಿಡಿಯುವ ಮನೋಭಾವ ಯಾರ ಗೌರವವನ್ನೂ ಹೆಚ್ಚಿಸುವುದಿಲ್ಲ ಎನ್ನುವ ಸೂಕ್ಷ್ಮವನ್ನು ನಿರ್ಲಕ್ಷಿಸಿ, ಕುರುಡಾಗಿ ಕಲ್ಲೆಸೆದಾಟ ಮುಂದುವರೆಸಿದರೆ 'ಮೌಲ್ಯ ವ್ಯವಸ್ಥೆ'ಯ ಮಾದರಿಗಳೆಲ್ಲ ಒಂದೊಂದಾಗಿ ಮಣ್ಣಾಗುತ್ತದೆ. ಇದರಿಂದ ವರ್ತಮಾನದ ಬದುಕಷ್ಟೇ ಗಾಸಿಗೊಳ್ಳುವುದಿಲ್ಲ; ನಾಳೆಗಳೂ ವಿರೂಪಗೊಳ್ಳುತ್ತವೆ; ಮುಂದಿನ ಪೀಳಿಗೆಗಳಿಗೆ ಅನುಸರಣೀಯ ಮಾದರಿಗಳೇ ಇಲ್ಲದಂತಾಗುತ್ತದೆ. ಕನಸುಗಳನ್ನು, ಮಾದರಿಗಳನ್ನು, ರೂಪಕಗಳನ್ನು ಜತನವಾಗಿರಿಸಿಕೊಳ್ಳುವುದು ನಮಗೆ ನಾವು ಮಾಡಿಕೊಳ್ಳುವ ಉಪಕಾರವೂ ಹೌದು, ಮುಂದಿನ ತಲೆಮಾರುಗಳಿಗೆ ಉಡುಗೊರೆಯೂ ಹೌದು.

'ಎಲ್ಲಿದೆ ನಂದನ, ಎಲ್ಲಿದೆ ಬಂಧನ, ಎಲ್ಲಾ ಇವೆ ಈ ನಮ್ಮೊಳಗೆ' (ಜಿ.ಎಸ್. ಶಿವರುದ್ರಪ್ಪ) ಎನ್ನುವ ಮಾತನ್ನು 'ಗಂಗಪಾಣಿ' ನೆನಪಿಸುತ್ತದೆ. ಕಾದಂಬರಿಯಲ್ಲಿನ 'ಗಾಂಧೀತೋಟ'ದ ಕನಸು ಬಹು ಸುಂದರವಾದುದು. ಈ ಗಾಂಧೀತೋಟವೇ ಕುವೆಂಪು ಪ್ರತಿಪಾದನೆಯ 'ಸರ್ವ ಜನಾಂಗದ ಶಾಂತಿಯ ತೋಟ'. ಈ ಕನಸು ಈ ನಾಡಿನ ಪ್ರತಿಯೊಬ್ಬರದೂ– ಬಹು ಮುಖ್ಯವಾಗಿ ಪ್ರಜಾ ಪ್ರತಿನಿಧಿಗಳದು– ಆಗಬೇಕು. ಆದರೆ, ತೋಟಗಳನ್ನು ರೂಪಿಸುವುದಿರಲಿ, ಗಿಡವೊಂದನ್ನು ನೆಡುವ ಮನೋಧರ್ಮವೇ ವಿರಳವಾಗುತ್ತಿದೆ.

ರೂಪಕಗಳ ಸಾವು ವ್ಯಕ್ತಿ, ಸಮಾಜ, ದೇಶ ಕೊಳೆಯುತ್ತಿರುವುದನ್ನು ಸೂಚಿಸುತ್ತದೆ. ರೂಪಕಗಳು ಉಳಿಯದೆ ಹೋದರೆ ವ್ಯಕ್ತಿಯೂ ಇಲ್ಲ, ದೇಶವೂ ಇಲ್ಲ.

■ **ಚಂಪಕಮಾಲಾ**

## ಮಾತೇ ಮುತ್ತು

- ನಾಲಿಗೆ ಹರಿತವಾದ ಚಾಕು ಇದ್ದಂತೆ, ರಕ್ತವನ್ನು ಹರಿಸದೇ ಕೊಲ್ಲಬಲ್ಲದು.
  —ಗೌತಮ ಬುದ್ಧ
- ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ.
  —ಇಂಗರ್ ಸಾಲ್
- ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.
  —ಗೋಪಾಲಕೃಷ್ಣ ಅಡಿಗ
- ಇತರರಿಗೆ ನೋವನ್ನು ಉಂಟುಮಾಡುವ ಮಾತುಗಳನ್ನು ಆಡಬಾರದು.
  —ಮಹಾವೀರ
- ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾಗುವುದಿಲ್ಲ.
  —ಗಿರೀಶ ಕಾರ್ನಾಡ
- ಅಧ್ಯಕ್ಷನೋ ಸೇನಾನಿಯೋ ಕಮ್ಮಾರನೋ ಚಮ್ಮಾರನೋ ಯಾರಾದರೇನು ಎಲ್ಲರ ಕಾಯಕವೂ ಪೂಜ್ಯ.
  —ಕುವೆಂಪು